


ಪಂ. ರವೀಂದ್ರ ಯಾವಗಲ್ ಮಲ್ಲಿಕಾರ್ಜುನ ಮನ್ಸೂರ ಅವರಿಗೆ ಸಾಥ್‌ಸಂಗತ್

# ದಂತಕಥೆಗಳಿಗೆ ತಬಲಾ ನುಡಿಸಿದ ಭಾಗ್ಯವಂತ

ಹಲವಾರು ರಾಗಗಳು ಒಂದೇ ತೆರನಾಗಿ ಇರುತ್ತವೆ. ಸ್ವರಸ್ಥಾನ ಒಂದೇ ಇರುತ್ತದೆ. ಹಂಸಧ್ವನಿ, ಭೂಪಾಲಿ, ಭೈರವ್ ಮುಂತಾದ ರಾಗಗಳು ಎರಡೂ ಪ್ರಕಾರಗಳಲ್ಲಿವೆ. ಹೀಗಾಗಿ ಸಂಗೀತ ಹೆಚ್ಚು ಜನರನ್ನು ತಲುಪುತ್ತದೆ. ಇವೆಲ್ಲವೂ ಪ್ಲಸ್ ಪಾಯಿಂಟ್.

ಹಾಗೆಂದು ಸ್ಥೂಲವಾಗಿ ವಿಶ್ಲೇಷಿಸಿದರೆ ಹಿಂದೂಸ್ತಾನಿ ಸಂಗೀತ ಎಂಬುದು ಎಲ್ಲ ಸಂಗೀತ ಪ್ರಕಾರಗಳಲ್ಲಿ ಒಂದು ದೊಡ್ಡ ಬ್ರ್ಯಾಂಚ್ ಇದ್ದ ಹಾಗೆ. ಇದರ ಸೂಕ್ಷ್ಮ ಮನೋಧರ್ಮ ಬೇರೆ ಇರುತ್ತದೆ. ಕರ್ನಾಟಕ ಸಂಗೀತ ಪ್ರಸ್ತುತಪಡಿಸುವ ರೀತಿ ಬೇರೆಯದು. ಎರಡೂ ಪ್ರಕಾರಗಳ ಸಂಗೀತ ಓಘ, ಓಟ ಬೇರೆ ಬೇರೆ ತರ ಇರುತ್ತದೆ. ಹಿಂದೂಸ್ತಾನಿ ಸಂಗೀತದಲ್ಲಿ ತಾನ್‌ಗಳು, ಆಕಾರ್ ತಾನ್‌ಗಳಿದ್ದರೆ ಕರ್ನಾಟಕ ಸಂಗೀತದಲ್ಲಿ ಕಲ್ಪನಾಸ್ವರ, ಚಿಟ್ಟೆಸ್ವರ, ತನಿಯಾವರ್ತನ ಎಂಬ ಅಂಶಗಳು ಸಂಗೀತದಲ್ಲಿ ತಾಂತ್ರಿಕವಾಗಿ ಒಳಗೊಂಡಿರುತ್ತವೆ.

**◆ ಹಿಂದೂಸ್ತಾನಿ ಸಂಗೀತದಲ್ಲಿ ಪ್ರಮುಖ ವಾದನ ತಬಲಾ. ಇಲ್ಲಿ ಸಾಥಿ ಕಲಾವಿದರು ಎದುರಿಸುವ ಸವಾಲುಗಳೇನು?**

ತಬಲಾಕ್ಕೆ ಅದರದ್ದೇ ಆದ ಭಾಷೆ ಇದೆ. ಹಿಂದಿನಿಂದಲೂ ಇದನ್ನು ಬರೀ ಸಾಥಿ ವಾದ್ಯ ಎಂದು ಸೀಮಿತಗೊಳಿಸಲಾಗಿದೆ. ಇದರಲ್ಲಿ ಅದ್ಭುತವಾಗಿ ಸೋಲೊ ನುಡಿಸಬಹುದು. ಬಹಳಷ್ಟು ಸಂಗೀತಪ್ರಿಯರನ್ನು ಆಕರ್ಷಿಸುವ ಗುಣ ತಬಲಾ ವಾದನಕ್ಕಿದೆ. ತಬಲಾದಲ್ಲಿ ಎಷ್ಟೊಂದು ಕಂಪೋಸಿಷನ್ಸ್ ಇದೆ, ಇದಕ್ಕೆ ಎಷ್ಟೊಂದು ಐಡೆಂಟಿಟಿ ಇದೆ. ಆದರೆ ಇದನ್ನು ಗಾಯನಕ್ಕೆ ಸಾಥಿ ವಾದ್ಯ ಎಂದು ಮಾತ್ರ ಪರಿಗಣಿಸುವುದು ತಪ್ಪು. ಒಂದು ಉದಾಹರಣೆ ನೋಡಿ. ತಬಲಾದ ಬಹುದೊಡ್ಡ ವಿದ್ವಾಂಸರಾದ ಉಸ್ತಾದ್ ಅಮೀರ್ ಹುಸೇನ್ ಖಾನ್ ಬಹಳ ವರ್ಷ ಹಿಂದೆಯೇ ಈ ವಾದ್ಯಕ್ಕೆ ಒಂದು ಒಳ್ಳೆಯ ಸ್ಥಾನಮಾನ ಕೊಡಬೇಕು ಎಂಬ ನಿಟ್ಟಿನಲ್ಲಿ ಅವರ ಜೀವನದುದ್ದಕ್ಕೂ ಸಾಥಿ ಮಾಡಲೇ ಇಲ್ಲ. ತಬಲಾವನ್ನು ಬರೀ ಸೋಲೊ ವಾದನಕ್ಕಷ್ಟೇ ಮುಡಿಪಾಗಿಟ್ಟಿದ್ದರು.

ಒಂದು ಘಟನೆ ನೆನಪಾಗ್ತದೆ. ಎರಡು ವರ್ಷಗಳ ಹಿಂದೆ ಧಾರವಾಡದಲ್ಲಿ ಒಂದು ಸಂಗೀತ ಕಾರ್ಯಕ್ರಮ ನಡೀತು. ಅಲ್ಲಿ ಸಂಘಟಕರ ಬಳಿ ತಬಲಾವನ್ನು ಸೋಲೊ ಆಗಿ ನುಡಿಸಿದಾಗ ಕೇಳಲು ಬಹಳ ಸೊಗಸಾಗಿರುತ್ತದೆ ಎಂದೆ. ಆಗ ಅವರು 'ಸೋಲೊ ಕಛೇರಿ ಇಟ್ಟರೆ ಕೇಳುಗರು ಸಿಗಲ್ಲ ಸರ್, ಜನಕ್ಕೆ ಅರ್ಥ ಆಗಲ್ಲ' ಎಂದುಬಿಟ್ಟರು. ಆದರೆ ನಾನು ಇಲ್ಲಿ ಸಂಗೀತ ಕಛೇರಿ ಪ್ರತೀವರ್ಷ ಆಯೋಜಿಸಿದಾಗ ಕಡ್ಡಾಯವಾಗಿ ವಿದ್ವಾಂಸರ ತಬಲಾಸೋಲೊ ಇಟ್ಟಿರುತ್ತೇನೆ. ವಿನಾಯಕ ತೊರವಿ ಅವರೂ ಅಹೋರಾತ್ರಿ ಸಂಗೀತೋತ್ಸವ ಮಾಡುವಾಗ ಒಂದು ತಬಲಾ ಸೋಲೊ ಕಛೇರಿ ಇಟ್ಟೇ ಇಡುತ್ತಾರೆ. ಎರಡು ತಾಸು ತಬಲಾ ನುಡಿಸಿದರೂ ಕೇಳುಗರು ಎಂಜಾಯ್ ಮಾಡ್ತಾರೆ. ಪಂ. ಯೋಗೀಶ್ ಶಂಷಿ, ಒಮ್ಮೆ ಬೆಂಗಳೂರಿನಲ್ಲಿ ಎರಡು ತಾಸು ತಬಲಾ ನುಡಿಸಿದ್ರು, ಒಬ್ರೂ ಎದ್ದು ಹೋಗಿಲ್ಲ.

ಹಾಗೆ ನೋಡಿದರೆ ತಬಲಾಕ್ಕೆ ಸಾಥಿಗೆ ಸಿಗುವಷ್ಟು ಮಾನ್ಯತೆ ಸೋಲೊಗೆ ಸಿಕ್ಕಿಲ್ಲ. ಒಂದು ಸಂಗೀತ ಕಛೇರಿ ಆಗಬೇಕಾದ್ರೆ ಎಲ್ಲರೂ ಸಮಾನವಾಗಿ ಕೈಜೋಡಿಸಿದರೆ ಮಾತ್ರ ಕಾರ್ಯಕ್ರಮ ಯಶಸ್ಸು ಸಾಧಿಸುವುದು. ಕೆಲವರು ಬರೀ ನಾಲ್ಕು ಠೇಕಾ ಕಲಿತು ಬಂದು ಸಾಥಿ ಮಾಡಲು ಕುಳಿತುಕೊಳ್ಳುತ್ತಾರೆ. ಆದರೆ 10–12 ವರ್ಷ ಗುರುಮುಖೇನ ನುಡಿಸಾಣಿಕೆ ಅಭ್ಯಾಸ ಮಾಡಿಕೊಂಡು ಬಂದವರು ಕೂಡ ಬರೀ ಸಾಥಿ ಮಾಡಲು ಕುಳಿತುಕೊಳ್ಳಬೇಕಾ? ಇದರಿಂದ ನುರಿತ ಕಲಾವಿದರಿಗೆ ಬೇಸರ ಆಗೋದು ಸಹಜವೇ.

**◆ ತಬಲಾ ಸಾಥಿ ನೀಡುವಾಗ ವಾದಕರು ಎದುರಿಸಬೇಕಾದ ಸೂಕ್ಷ್ಮಗಳೇನು?**

ಹಿರಿಯ ಕಲಾವಿದರಿಗೆ ಸಾಥ್ ಸಂಗತ್ ನೀಡುವಾಗ ಅವರ ಹಾಡುಗಾರಿಕೆಯ ಮಟ್ಟವನ್ನು ತಿಳಿದುಕೊಂಡು ನುಡಿಸಬೇಕಾಗುತ್ತದೆ. ನಮ್ಮಲ್ಲಿ ಒಳ್ಳೆಯ ಬತ್ತಳಿಕೆ ಇದೆ, ಆಯುಧ ಇದೆ, ಅದನ್ನು ಎಲ್ಲಿ ಎಷ್ಟು ಬೇಕೊ ಅಷ್ಟೇ ಪ್ರಯೋಗಿಸಬೇಕು. ಎಲ್ಲವೂ ಗೊತ್ತಿದೆ ಎಂದು ಆಟಂಬಾಂಬ್ ಹಾಕಿದರೆ, ಅದು ಕಛೇರಿಯಲ್ಲಿ ಆಭಾಸ ಸೃಷ್ಟಿಸಲು ಕಾರಣವಾಗುತ್ತದೆ.

## ಪ್ರಯೋಗಶೀಲ ಗುಣ

ಕಲಾವಿದರಲ್ಲಿ ಪ್ರಯೋಗಶೀಲತೆ ಬಹಳ ಮುಖ್ಯ. ಕಲಾವಿದರಿಗೆ ಹೊಸದನ್ನು ಆಸ್ವಾದಿಸುವ, ಕಲಿಯುವ, ಕೇಳಿ ತಿಳಿದುಕೊಳ್ಳುವ ಹಸಿವು ಇರಬೇಕು. ಖ್ಯಾತ ಮೃದಂಗ ವಿದ್ವಾಂಸ ಪಾಲ್ಘಾಟ್ ಮಣಿ ಅಯ್ಯರ್ ಅವರೊಮ್ಮೆ ಊಟಕ್ಕೆ ಕುಳಿತಿದ್ದಾಗ ಮನೆಮುಂದೆ ಶವಯಾತ್ರೆ ಹೋಗ್ತಿತ್ತಂತೆ. ಅಲ್ಲಿ ಯಾರೋ ಹಲಿಗೆ ಬಾರಿಸ್ತಾ ಇದ್ನಂತೆ. ಅದು ಎಷ್ಟು ಮಾಧುರ್ಯಪೂರ್ಣವಾಗಿತ್ತೆಂದರೆ ಅಯ್ಯರ್ ಅವರು ಊಟ ಮಾಡುವುದನ್ನು ಬಿಟ್ಟು ಶವಯಾತ್ರೆಯ ಹಿಂದೆಯೇ ಹಲಿಗೆ ವಾದನ ಕೇಳುತ್ತಾ ಸ್ಮಶಾನದವರೆಗೂ ಹೋಗಿದ್ದರಂತೆ. ಅಷ್ಟೇ ಅಲ್ಲದೆ ಹಲಿಗೆ ವಾದ್ಯದ ನಾದವನ್ನು ಮೃದಂಗದಲ್ಲಿ ಅಳವಡಿಸಿಕೊಂಡು ಹೊಸ ಪ್ರಯೋಗ ಮಾಡಿದ್ದರು.

ತಬಲಾ ವಾದನದ ಘನ ವಿದ್ವಾಂಸ ಉಸ್ತಾದ್ ಅಹ್ಮದ್ ಖಾನ್ ತಿರಕುವ ಅವರು ತಬಲಾದ ದಂತಕತೆ ಎಂದೇ ಪ್ರಸಿದ್ಧರಾದವರು. ಅವರು ಎಷ್ಟು ಪ್ರಯೋಗಶೀಲರಾಗಿದ್ದರೆಂದರೆ ವಾದ್ಯ ನುಡಿಸಾಣಿಕೆಯನ್ನು ನಂಬಲಾಗದಷ್ಟು ರೀತಿಯಲ್ಲಿ ಅಚ್ಚುಕಟ್ಟಾಗಿಸಿದರು. ದಿನಕ್ಕೆ 18–20 ತಾಸು ಅಭ್ಯಾಸ ಮಾಡುತ್ತಿದ್ದರು.

## ಪ್ರಶಸ್ತಿ-ಪುರಸ್ಕಾರ

ಪಂ. ಯಾವಗಲ್ ಆಕಾಶವಾಣಿಯ 'ಎ' ಗ್ರೇಡ್ ಕಲಾವಿದ. ಆಕಾಶವಾಣಿಯಲ್ಲೇ ಸೇವೆ ಸಲ್ಲಿಸುತ್ತಿರುವ ಅವರ ಸಂಗೀತ ಸೇವೆಯನ್ನು ಗಮನಿಸಿ ಹಲವು ಪ್ರಶಸ್ತಿಗಳು ಬಂದಿವೆ. ಗದುಗಿನ ಕಲಾಚೇತನ ಸಾಂಸ್ಕೃತಿಕ ಅಕಾಡಮಿಯಿಂದ 'ನಾದನಿಧಿ' ಪುರಸ್ಕಾರ, ಗುರು ಗಂಧರ್ವ ರಾಷ್ಟ್ರೀಯ ಪುರಸ್ಕಾರ, ಸೊರಬದ ಸಂಗೀತ, ಸಂಗೀತ ಸೇವಾ ಸಮಿತಿಯಿಂದ ಚಂದ್ರಹಾಸ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಗೌರವ, ಗುರು ಗಂಧರ್ವ ರಾಷ್ಟ್ರೀಯ ಪ್ರಶಸ್ತಿ ಪ್ರಮುಖವಾಗಿವೆ.